# ‘ಕ್ರಾಂತಿ ಬಂತು, ಕ್ರಾಂತಿ’ ನಾಟಕದ ವಸ್ತು, ತಂತ್ರ ಮತ್ತು ತಾತ್ವಿಕತೆ

ವಿಜಯೇಂದ್ರ ಕುಮಾರ್ ಜಿ.ಎಲ್.

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ.

DOI: https://doi.org/10.5281/zenodo.22543273

## ABSTRACT:

ಪಿ. ಲಂಕೇಶ್ ವಿರಚಿತ ‘ಕ್ರಾಂತಿ ಬಂತು, ಕ್ರಾಂತಿ’ ಏಕಾಂಕ ನಾಟಕವು ಕ್ರಾಂತಿಯ ಹೆಸರಿನಲ್ಲಿ ನಡೆಯುವ ಬೂಟಾಟಿಕೆ ಹಾಗೂ ನಾಯಕತ್ವದ ಡಂಭಾಚಾರದ ಕಟು ವಿಡಂಬನೆಯಾಗಿದೆ. ಆಕರ್ಷಕ ಭಾಷಣಗಳ ಮೂಲಕವೇ ಕ್ರಾಂತಿಯ ಭ್ರಮೆ ಹುಟ್ಟಿಸುವ ಪ್ರೊಫೆಸರ್ ಭಗವಾನ್, ಆತನ ಸೈದ್ಧಾಂತಿಕ ಮಾತುಗಳಿಗೆ ಮರುಳಾಗಿ ನಕ್ಸಲೈಟ್ ಆಗಿ ಪರಿವರ್ತನೆಗೊಂಡು, ಕೊನೆಗೆ ಗುರುವಿನಿಂದಲೇ ಹತ್ಯೆಗೀಡಾಗುವ ಮುಗ್ಧ ವಿದ್ಯಾರ್ಥಿ ದಿನಕರನ ದುರಂತ ಈ ಕೃತಿಯ ಕೇಂದ್ರವಸ್ತು. ಬದ್ಧತೆ, ಪ್ರಾಮಾಣಿಕತೆ ಹಾಗೂ ತ್ಯಾಗವಿಲ್ಲದ ಬರೀ ಮಾತುಗಳು ಕ್ರಾಂತಿಯಾಗಲಾರವು; ಬದಲಿಗೆ ಅದು ಸ್ವಾರ್ಥ ಸಾಧನೆಯ, ಅಧಿಕಾರ ದಾಹದ ಮೆಟ್ಟಿಲಾಗುತ್ತದೆ ಎಂಬ ತಾತ್ವಿಕತೆಯನ್ನು ಇಲ್ಲಿ ಮಂಡಿಸಲಾಗಿದೆ. ಕಳ್ಳ ಮತ್ತು ದಿನಕರನ ಮುಖಾಮುಖಿ, ಭಗವಾನನ ಸೋಗಲಾಡಿತನ ಹಾಗೂ ಸುಧಾಳ ಚಾಣಾಕ್ಷತೆಯ ಮೂಲಕ, ವ್ಯಕ್ತಿಪೂಜೆಯಲ್ಲಿ ಮುಳುಗಿದ ಸಮಾಜದಲ್ಲಿ ನೈಜತೆಯು ಸೋತು ನಕಲಿಯೇ ಹೇಗೆ ವಿಜೃಂಭಿಸುತ್ತದೆ ಎನ್ನುವ ವಾಸ್ತವವನ್ನು ಅತ್ಯಂತ ಮಾರ್ಮಿಕವಾಗಿ ವಿಶ್ಲೇಷಿಸಲಾಗಿದೆ.

## KEYWORDS:

ಏಕಾಂಕ ನಾಟಕ, ವ್ಯಂಗ್ಯ–ವಿಡಂಬನೆ, ಸಮಾಜವಾದ, ಕಮ್ಯುನಿಸಂ, ಕ್ರಾಂತಿ, ಪೊಲೀಸು, ನಕ್ಸಲೈಟ್, ವ್ಯವಸ್ಥೆ.

**ಪೀಠಿಕೆ:**

ಪಿ. ಲಂಕೇಶ್ ನವ್ಯ ಮತ್ತು ನವ್ಯೋತ್ತರ ಸಂದರ್ಭದ ಮಹತ್ವದ ನಾಟಕಕಾರ. ನನ್ನ ತಂಗಿಗೊಂದು ಗಂಡು ಕೊಡಿ, ಟಿ. ಪ್ರಸನ್ನನ ಗೃಹಸ್ಥಾಶ್ರಮ, ಪೊಲೀಸ್ ಇದ್ದಾರೆ ಎಚ್ಚರಿಕೆ, ಸಿದ್ಧತೆ, ಕ್ರಾಂತಿ ಬಂತು ಕ್ರಾಂತಿ, ಗಿಳಿಯು ಪಂಜರದೊಳಿಲ್ಲ, ತೆರೆಗಳು, ಸಂಕ್ರಾಂತಿ, ಗುಣಮುಖ- ಹೀಗೆ ಹಲವು ನಾಟಕಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಮೊದಲ ಏಳು ನಾಟಕಗಳು ಏಕಾಂಕ ನಾಟಕಗಳಾದರೆ, ಕೊನೆಯವೆರಡು ಪೂರ್ಣ ಪ್ರಮಾಣದ ನಾಟಕಗಳು. ದೊರೆ ಈಡಿಪಸ್ ಮತ್ತು ಅಂಟಿಗೊನೆ- ಲಂಕೇಶರು ಇಂಗ್ಲಿಷ್ ಭಾಷೆಯ ಮೂಲಕ ಅನುವಾದಿಸಿರುವ ಗ್ರೀಕ್ ಮೂಲದ ನಾಟಕಗಳು.

ಲಂಕೇಶರ ನಾಟಕಗಳು ಸಾಹಿತ್ಯಕವಾಗಿಯೂ ರಂಗಪಠ್ಯಗಳಾಗಿಯೂ ಯಶಸ್ಸು ಗಳಿಸಿವೆ; ಕನ್ನಡ ರಂಗಭೂಮಿಯ ಮೇಲೆ ಮಹತ್ವದ ಪ್ರಭಾವ ಬೀರಿವೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಲೇಖನದಲ್ಲಿ, ಪ್ರಾಯೋಗಿಕ ವಿಮರ್ಶಾ ವಿಧಾನವನ್ನು ಅನುಸರಿಸಿ ಲಂಕೇಶರ 'ಕ್ರಾಂತಿ ಬಂತು, ಕ್ರಾಂತಿ' ನಾಟಕದ ವಸ್ತು, ತಂತ್ರ ಮತ್ತು ತಾತ್ವಿಕತೆಯನ್ನು ಶೋಧಿಸಿಕೊಳ್ಳಲಾಗಿದೆ.

'ಕ್ರಾಂತಿ ಬಂತು, ಕ್ರಾಂತಿ'- ಮೂರು ದೃಶ್ಯಗಳ ಏಕಾಂಕ ನಾಟಕ. ಮೊದಲ ದೃಶ್ಯ ಭಗವಾನನ ಅಬ್ಬರದ ಭಾಷಣದ ಮೂಲಕ ಆರಂಭವಾಗುತ್ತದೆ. ನಾಟಕದ ಕೊನೆಯ, ಅಂದರೆ ಮೂರನೇ ದೃಶ್ಯ, ಅಸ್ಪಷ್ಟಗೊಂಡು ಅರ್ಧದಲ್ಲೇ ನಿಂತ ಭಗವಾನನ ಭಾಷಣ ಮತ್ತು ಸುಧಾಳ ದಿಢೀರ್ ಮಧ್ಯಪ್ರವೇಶದ ಮೂಲಕ ಮುಕ್ತಾಯವಾಗುತ್ತದೆ. ಬಹಿರಂಗ ವೇದಿಕೆಯಲ್ಲಿ ಜರುಗುವ ಮೊದಲ ಮತ್ತು ಮೂರನೆಯ ದೃಶ್ಯಗಳು ಅತ್ಯಂತ ಸಂಕ್ಷಿಪ್ತ ಗಾತ್ರದವು. ಈ ನಾಟಕದ ಮುಖ್ಯ ಘಟನಾವಳಿಗಳು ನಡೆಯುವುದು ಎರಡನೇ ದೃಶ್ಯದಲ್ಲಿ; ಭಗವಾನನ ಮನೆಯಲ್ಲಿ.

ನಾಟಕದ ಕೇಂದ್ರವಸ್ತು ಕ್ರಾಂತಿ. ಇಡೀ ನಾಟಕದ ಚಲನೆ ಕ್ರಾಂತಿ ಮತ್ತು ಕ್ರಾಂತಿಯ ಸುತ್ತ ಸುತ್ತುತ್ತದೆ. ಇಲ್ಲಿ ಕ್ರಾಂತಿಯನ್ನು ಕುರಿತ ಹೊಗಳಿಕೆ ಮತ್ತು ತೆಗಳಿಕೆಗಳೆರಡೂ ಇವೆ. ಸುಳ್ಳು-ಗೋಸುಂಬೆತನ ಮತ್ತು ಕ್ರಾಂತಿ ಒಟ್ಟೊಟ್ಟಿಗೆ ಸಾಗಲು ಸಾಧ್ಯವಿಲ್ಲ ಎಂಬ ಆತ್ಯಂತಿಕ ಸತ್ಯವನ್ನು ಈ ನಾಟಕ ಹೇಳುತ್ತದೆ. ವೈಯಕ್ತಿಕ ಬದುಕಿನಲ್ಲಿ ಬದಲಾವಣೆಗಳಾಗದೆಯೇ ಸಾಮಾಜಿಕ ಕ್ರಾಂತಿಯಾಗಲು ಸಾಧ್ಯವಿಲ್ಲ. ಕ್ರಾಂತಿ ಎಂಬುದು ಅದ್ಭುತ ಭಾಷಣಗಳಿಂದ ಸಂಭವಿಸಲಾರದು. ನಿರಂತರ ಹೋರಾಟ, ಶ್ರಮ, ನೈಜ ಕಾಳಜಿ, ತ್ಯಾಗ ಮತ್ತು ಬದ್ಧತೆಯಿಲ್ಲದೆ ಕ್ರಾಂತಿಯ ಬಗ್ಗೆ ಕೇವಲ ಬಣ್ಣದ ಮಾತುಗಳನ್ನಾಡಿದರೆ, ಅವು ಕ್ರಾಂತಿಯ ಅಣಕದಂತೆ ಕಾಣುತ್ತವೆ.

ಹೋರಾಟ ಮತ್ತು ರಾಜಕಾರಣ ವ್ಯಕ್ತಿಪೂಜೆಗೆ ಇಳಿದಾಗ; ಹಾರ-ತುರಾಯಿ-ಜಯಕಾರಗಳ ಮಟ್ಟಕ್ಕೆ ಜಾರಿದಾಗ; ಆಟೋಗ್ರಾಫು -

ಫೋಟೋಗ್ರಾಫು, ಅಭಿಮಾನಿಗಳ ಹುಚ್ಚು ಕುಣಿತಗಳಿಗೆ ದಾರಿ ಮಾಡಿಕೊಟ್ಟಾಗ; ಕ್ರಾಂತಿಯ ಭ್ರಾಂತಿಯಲ್ಲಿ ವಾಸ್ತವಗಳು ಮರೆಯಾಗುತ್ತವೆ. ಸುಳ್ಳುಗಳು ಮೆರೆಯುತ್ತವೆ. ಸತ್ಯ, ಪ್ರಾಮಾಣಿಕತೆ, ಸೈದ್ಧಾಂತಿಕ ಬದ್ಧತೆಗಳು ಹಳ್ಳಹಿಡಿದು, ಕ್ರಾಂತಿ ಅರ್ಥಹೀನ ಎನಿಸುತ್ತದೆ. ಆದರೆ ಇದನ್ನರಿಯದ ಮುಗ್ಧ-ಮೂರ್ಖರು ಭ್ರಾಂತಿಯನ್ನೇ ಕ್ರಾಂತಿ ಎಂದು ನಂಬುತ್ತಾರೆ. ಅಂತಿಮವಾಗಿ ವ್ಯವಸ್ಥೆಯಲ್ಲಿ ಕ್ರಾಂತಿಯ ಶವಯಾತ್ರೆಯೂ ಸುಳ್ಳಿನ ಮೆರವಣಿಗೆಯೂ ಸಂಭ್ರಮ ಸಡಗರಗಳಿಂದ ನಡೆಯುತ್ತದೆ. 'ನೈಜತೆ' ಸೋತು, 'ನಕಲಿ'ಯೇ ಗೆಲ್ಲುತ್ತದೆ ಎಂಬುದನ್ನು ಕೆಲವೊಂದು ನಿರ್ದಿಷ್ಟ ಪಾತ್ರಗಳ ಮೂಲಕ ಸಾಂಕೇತಿಕವಾಗಿ ಮನದಟ್ಟು ಮಾಡಿಸುವ ವ್ಯಂಗ್ಯ-ವಿಡಂಬನಾತ್ಮಕ ನಾಟಕ 'ಕ್ರಾಂತಿ ಬಂತು, ಕ್ರಾಂತಿ'.

ಯಾವ ನಂಬಿಕೆಯೂ, ತಿಳುವಳಿಕೆಯೂ, ತಾತ್ವಿಕತೆಯೂ ಸಹ ಅಂತಿಮವಲ್ಲ. ಮನುಷ್ಯ ಸಂಬಂಧಗಳು, ಸೈದ್ಧಾಂತಿಕ ಬದ್ಧತೆ, ನೀತಿ-ನಿಲುವುಗಳೂ ಸಹ ಪರಿಸ್ಥಿತಿಗೆ ಅನುಗುಣವಾಗಿ ಬದಲಾಗುತ್ತವೆ ಎಂಬ ತಾತ್ವಿಕ ಎಚ್ಚರ ಇಲ್ಲಿದೆ. ಕ್ರಾಂತಿ ಎಂಬುದು ಕ್ರಿಯೆಗಿಳಿಯದೆ ಕೇವಲ ಮಾತಿಗಷ್ಟೇ ಸೀಮಿತವಾದರೆ ಆ ಮಾತು ಅರ್ಥಹೀನವಾಗುತ್ತದೆ. ಚಿಂತನೆಗಳಿಗೆ ವೈಚಾರಿಕತೆಯ ಸ್ಪರ್ಶವಿಲ್ಲದೆ, ವ್ಯಕ್ತಿತ್ವದಲ್ಲಿ ಪ್ರಾಮಾಣಿಕತೆ ನೆಲೆಸದೆ, ಕಾಳಜಿಯೆಂಬುದು ಕೇವಲ ತೋರಿಕೆಯದಾದರೆ, ಕ್ರಾಂತಿಯ ಕಹಳೆ ಮೊಳಗಿಸುವ ನಾಯಕನ ವ್ಯಕ್ತಿತ್ವದ ಸುತ್ತ ಕೃತಕ ಪ್ರಭಾವಳಿ ರೂಪುಗೊಳ್ಳುತ್ತದಷ್ಟೇ. ವಸ್ತುಸ್ಥಿತಿ ಹೀಗಿದ್ದೂ ಸಹ ಭಗವಾನನಂತಹ ಆತ್ಮರತಿಯ ನಾಯಕನನ್ನು ಎತ್ತಿ ಮೆರೆಯಿಸುವ ಈ ಸಮಾಜದಲ್ಲಿ ಕ್ರಾಂತಿ ಸಾಧ್ಯವೇ ಇಲ್ಲ ಎಂಬ ತಾತ್ವಿಕತೆಯನ್ನು ಮಂಡಿಸುವ ನಾಟಕವಿದು.

**ಭಗವಾನನ ಭಾಷಣಕಲೆ:**

ಭಗವಾನನದು ವೈರುಧ್ಯಗಳಿಂದ ಕೂಡಿದ ವ್ಯಕ್ತಿತ್ವ. ಆದರೂ ತನ್ನ ಮಾತಿನ ಚಾಣಾಕ್ಷತೆಯಿಂದಲೇ ಕೇಳುಗರನ್ನು ಮೋಡಿ ಮಾಡುವ ಭಾಷಣಕಲೆ ಇವನಿಗೆ ಸಿದ್ಧಿಸಿದೆ. ಮೊದಲ ದೃಶ್ಯದಲ್ಲಿನ ಭಾಷಣದಲ್ಲಿ ಭಗವಾನ್, ಒಂದೆಡೆ ತನ್ನ ವೈಯಕ್ತಿಕ ವರ್ಚಸ್ಸನ್ನು ವೈಭವೀಕರಿಸಿಕೊಳ್ಳುತ್ತಾ, ಮತ್ತೊಂದೆಡೆ ಸಮಾಜವಾದ ಮತ್ತು ಕಮ್ಯುನಿಸಂಗಳನ್ನು ತುಚ್ಛೀಕರಿಸುವುದನ್ನು ನಾವು ಗಮನಿಸಬಹುದು. ಸಿದ್ಧಾಂತಕ್ಕಿಂತ ತಾನು ದೊಡ್ಡವನು ಎಂದು ಬಿಂಬಿಸಿಕೊಳ್ಳುವ ಖಯ್ಯಾಲಿ ಮತ್ತು ನಾನು ಎಂಬ ಅಹಂ ಈತನ ಮಾತುಗಳಲ್ಲಿದೆ.

''ನಾನು ಅಧ್ಯಾಪಕ, ನಾನು ವಿದ್ಯಾರ್ಥಿಗಳ ಕಷ್ಟ ನೋಡಿದ್ದೇನೆ. ಡಿಸೆಂಬರ್ ಚಳಿಯಲ್ಲಿ, ಹಾಕಲು ಅಂಗಿಯಿಲ್ಲದೆ ಹೊಟ್ಟೆಯಲ್ಲಿ ಹನಿ ಗಂಜಿಯಿಲ್ಲದೆ ಬರಿಗಾಲಲ್ಲಿ ನಡೆದು ಬರುವ ವಿದ್ಯಾರ್ಥಿಗಳನ್ನು ನಾನು ಬಲ್ಲೆ. ಅವರಿಗೆ ನಾನು ಪಂಪ,

ಕುಮಾರವ್ಯಾಸ, ಶೇಕ್ಸ್ಪಿಯರ್ ಪಾಠ ಹೇಳಿ ಮನೆಗೆ ಹೋಗಿ ಹೇಗೆ ನಿದ್ರಿಸಲಿ?"[1] ಎಂದು ಥೇಟು ರಾಜಕಾರಣಿಯಂತೆ ಭಾಷಣ ಮಾಡುತ್ತಾನೆ.

"ನಮಗೀಗ ಬೇಕಾದದ್ದು ಸಮಾಜವಾದವಲ್ಲ, ಪ್ರಜಾಪ್ರಭುತ್ವವಲ್ಲ, ಅಧಿಕಾರಶಾಹಿಯಲ್ಲ - ನಮ್ಮ ಬದುಕನ್ನು ಮೂಲಭೂತವಾಗಿ ಬದಲಿಸಬಲ್ಲಂಥ ಬಿರುಗಾಳಿ; ನಮ್ಮ ಎಲ್ಲ ಕನಸುಗಳನ್ನು ನಿಜವಾಗಿಸಬಲ್ಲಂಥ ಕ್ರಾಂತಿ"[2] ಎಂದು ಅಬ್ಬರಿಸುತ್ತಾ, ಎಲ್ಲಾ ಸಮಸ್ಯೆಗಳಿಗೂ ಕ್ರಾಂತಿಯಲ್ಲಿ ಪರಿಹಾರವಿದೆ ಎಂದು ಯುವಜನತೆಯಲ್ಲಿ ಕನಸುಗಳನ್ನು ಬಿತ್ತುತ್ತಾನೆ. ತಬ್ಬಿಬ್ಬುಗೊಳಿಸುತ್ತಾನೆ. 'ನಮ್ಮಂಥವರ ಕನಸು', 'ನಮ್ಮಂಥವರ ಆದರ್ಶ'- ಎಂದು ಎಲ್ಲರನ್ನೂ ಒಳಗೊಳ್ಳುವಂತೆ ಮಾತನಾಡಿ, ನೊಂದ ಜೀವಗಳನ್ನು ಭ್ರಷ್ಟವ್ಯವಸ್ಥೆಯ ವಿರುದ್ಧ ಬಡಿದೆಬ್ಬಿಸುತ್ತಾನೆ. ಅವರನ್ನೇ ತನ್ನ ಆಯುಧಗಳನ್ನಾಗಿಸಿಕೊಳ್ಳುತ್ತಾನೆ. ಹೀಗೆ ಭಗವಾನನ ಆಯುಧವಾಗಿ ರೂಪುಗೊಂಡು ಬಲಿಪಶುವಾದ ವಿದ್ಯಾರ್ಥಿಯೇ- ನಕ್ಸಲೈಟ್ ದಿನಕರ.

**ನಕ್ಸಲೈಟ್ ದಿನಕರನ ಕ್ರಾಂತಿಮಾರ್ಗ:**

ಆಸ್ತಿಯ ಬಗ್ಗೆ ನನಗೆ ಸ್ವಲ್ಪವೂ ನಂಬಿಕೆಯಿಲ್ಲ ಎನ್ನುತ್ತಾ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಕೆಂಡಕಾರುವ ಬಿಸಿರಕ್ತದ ಹುಡುಗ ದಿನಕರ. ಈತ ಸಾಮಾಜಿಕ ಅಸಮಾನತೆಗಳಿಗೆ ಹಿಂಸಾತ್ಮಕ ಮಾರ್ಗದಲ್ಲಿ ಪರಿಹಾರವನ್ನು ಕಂಡುಕೊಂಡವನು. ರಕ್ತಕ್ರಾಂತಿಯ ಮೂಲಕವೇ ಸಮಾಜದಲ್ಲಿ ಸಮತೆ ತರಬಹುದು ಎಂದು ನಂಬಿದವನು. ಬಡವರ ಶ್ರಮದ ಪ್ರತಿಫಲವನ್ನು ಅನುಭವಿಸುವ; ಸಂಪತ್ತನ್ನು ಅಕ್ಷರಶಃ ಕಳ್ಳತನ ಮಾಡುವ ಭ್ರಷ್ಟ, ಶ್ರೀಮಂತ, ಅಧಿಕಾರಶಾಹಿ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ನಖಶಿಖಾಂತ ಉರಿದುಬೀಳುತ್ತಾನೆ ನಕ್ಸಲೈಟ್ ದಿನಕರ. ಈತನ ವ್ಯಕ್ತಿತ್ವ ಕಟಕಟೆಯಲ್ಲಿ ನಿಲ್ಲುವುದು ಕಳ್ಳನೊಂದಿಗಿನ ನೇರ ಮುಖಾಮುಖಿಯಲ್ಲಿ.

ಕ್ರಾಂತಿಯ ಹೆಸರಿನಲ್ಲಿ ದಿನಕರನನ್ನು ನಕ್ಸಲೈಟ್ ಹೋರಾಟಗಾರನಾಗಿ ಬೆಳೆಸಿದ್ದೇ ಭಗವಾನ್. ಕಮ್ಯುನಿಸಂನ ಆಶಯ-ಆದರ್ಶಗಳನ್ನು ಉತ್ಪ್ರೇಕ್ಷಿಸಿ, ಅತಿರೇಕದ ಮುಗ್ಧ ಕನಸುಗಳನ್ನು ದಿನಕರನ ಮೆದುಳಿನಲ್ಲಿ ತುಂಬಿ, ಆತ ಪಿಸ್ತೂಲು ಹಿಡಿದು ಹಿಂಸಾತ್ಮಕ ದಾರಿಯಲ್ಲಿ ಸಾಗುವಂತೆ ಮಾಡಿದ್ದೂ ಸಹ ಭಗವಾನ್. ಆದರೆ ಮುಂದೆ ಇದೇ ಭಗವಾನನ ದೆಸೆಯಿಂದ ತನ್ನದೇ ಪಿಸ್ತೂಲಿನ ಗುಂಡೇಟಿಗೆ ದಿನಕರ ಬಲಿಯಾದ ಅನಿರೀಕ್ಷಿತ ಘಟನೆ ನಾಟಕಕ್ಕೆ ವಿಚಿತ್ರ ತಿರುವು ನೀಡುತ್ತದೆ.

**ದಿನಕರನ ಕೊಲೆಯ ಸುತ್ತ:**

ನಾಟಕದ ಘಟನಾವಳಿಗಳಲ್ಲಿನ ಈ ಅನಿರೀಕ್ಷಿತ ತಿರುವು ಎಂಥವರನ್ನೂ ಸಹ ಆಘಾತಕ್ಕೆ ಒಳಪಡಿಸುತ್ತದೆ. ದಿನಕರನನ್ನು ನೈತಿಕವಾಗಿ ಎದುರಿಸಲಾಗದ ಭಗವಾನನ

ಮತ್ತು ಸುಧಾಳ ಹೇಡಿತನವೇ ದಿನಕರನ ಕೊಲೆಗೆ ಕಾರಣ. ಆಶ್ರಯ ನೀಡುವ ನೆಪದಲ್ಲಿ ಮನೆಗೆ ಕರೆಯಿಸಿಕೊಂಡು, ಸ್ವತಃ ಕೊಲ್ಲುವ ಧೈರ್ಯವಿಲ್ಲದಿದ್ದರೂ, ತನ್ನ ಸುರಕ್ಷತೆಗಾಗಿ ಸುಧಾಳ ಕೈಗಳಿಂದ ದಿನಕರನನ್ನು ಕೊಲ್ಲಿಸಿದ್ದೇ ಅಲ್ಲದೆ, ಸಮಾಜಘಾತುಕ ನಕ್ಸಲೈಟ್‌ನನ್ನು ಕೊಂದ ಹೆಸರು ತನಗೇ ಸಲ್ಲುವಂತೆ ಸನ್ನಿವೇಶ ನಿರ್ಮಾಣ ಮಾಡಿ, ವಿಜೃಂಭಿಸಿದ ಚತುರ ಪ್ರೊಫೆಸರ್– ಭಗವಾನ್.

ಭಗವಾನ್ ಕೊಲ್ಲುವವನಲ್ಲ, ಉಪಾಯವಾಗಿ ಕೊಲ್ಲಿಸುವವನು. ರಕ್ತದ ಕಲೆಗಳು ತನಗೆ ಅಂಟಿಕೊಳ್ಳದ ಹಾಗೆ ಕೈಗವಸುಗಳನ್ನು ಧರಿಸಿದ ಜಾಣನೀತ. ಆದ್ದರಿಂದಲೇ, 'ನಾನು ಅವನನ್ನು ಕೊಲ್ಲಲಿಲ್ಲ; ಈ ಸಮಾಜ ಕೊಂದದ್ದು'[3] ಎಂದು ತುಂಬಿದ ಸಭೆಯಲ್ಲಿ ಹೇಳುತ್ತಾನೆ.

ದಿನಕರನ ಕೊಲೆಯ ನಂತರದ ಬೆಳವಣಿಗೆಗಳು ನಾಟಕದ ಪ್ರೇಕ್ಷಕರಲ್ಲಿ/ ಓದುಗರಲ್ಲಿ ನಿಜಕ್ಕೂ ವಿಷಾದ ಭಾವ ಮೂಡಿಸುತ್ತವೆ. ಆದರೂ ಇಡೀ ದೃಶ್ಯದಲ್ಲಿ ಆಶ್ಚರ್ಯದ ಸಂಗತಿಯೆಂದರೆ, ದಿನಕರನ ಸಾವಿಗೆ ಕಂಬನಿ ಮಿಡಿಯುವವರೇ ಇಲ್ಲದಿರುವುದು. ದಿನಕರ ಮೂಲತಃ ಬಡ ವಿದ್ಯಾರ್ಥಿ, ಭ್ರಷ್ಟಗೊಂಡ ವ್ಯವಸ್ಥೆಯಿಂದ ನೊಂದು ಬೆಂದವನು. ಅನಾಥ ಪ್ರಜ್ಞೆಯಲ್ಲಿ ನರಳಿದವನು. ಅಂತಹ ದಿನಕರನನ್ನು ನಕ್ಸಲೈಟ್ ಆಗಿ ಪರಿವರ್ತಿಸಿ, ತನ್ನನ್ನು ಪ್ರಶ್ನಿಸಿದ ಕಾರಣಕ್ಕೆ ಕೊನೆಗೆ ಆತನ ಜೀವವನ್ನೇ ಬಲಿ ಪಡೆದದ್ದು ಭಗವಾನ್.

ಆದರೆ ಈ ವಿಚಾರದಲ್ಲಿ ವಾಸ್ತವ ಯಾರಿಗೂ ಬೇಕಿಲ್ಲ. ಸಂಬಂಧಪಟ್ಟವರು ಮತ್ತು ಸಂಬಂಧಪಡದವರು– ಎಲ್ಲರೂ ತಮ್ಮ ಮೂಗಿನ ನೇರಕ್ಕೆ ಹೇಳಿಕೆಗಳನ್ನು ಕೊಡುತ್ತಾರೆ. ದಿನಕರನ ಬದುಕಿನ ಸುತ್ತ ಮತ್ತು ಸಾವಿನ ಸುತ್ತ ಕಲ್ಪನೆಯ ರೆಕ್ಕೆಪುಕ್ಕಗಳು ಹುಟ್ಟಿಕೊಳ್ಳುತ್ತವೆ. ನೆರೆಹೊರೆಯವರ ದೇಶಾವರಿ ಮಾತುಗಳು; ಮುಗ್ಧತೆಯ ಮುಖವಾಡ ಧರಿಸಿದ ಭಗವಾನನ ಮೌನ; ಸ್ಪಂದಿಸುವ ಸ್ನೇಹಿತರಂತೆ ನಟಿಸುವ ಶಂಕರ ರಾಮದಾಸರ ಸೋಗಲಾಡಿತನ; ದಿನಕರನ ಕೊಲೆಯನ್ನು ಎನ್ಕೌಂಟರ್ ಆಗಿ ಪರಿವರ್ತಿಸಿ, ಹೆಸರು ಪಡೆದುಕೊಳ್ಳುವ ಪೊಲೀಸರ ಪ್ರಯತ್ನ; ಆ ಪೊಲೀಸರನ್ನು ಮೀರಿಸಿ ದಿನಕರನ ಕೊಲೆಯನ್ನು ಬಂಡವಾಳ ಮಾಡಿಕೊಳ್ಳುವ ಸುಧಾಳ ಚಾಲಾಕಿತನದಲ್ಲಿ ಎರಡನೇ ದೃಶ್ಯ ಮುಕ್ತಾಯವಾಗುತ್ತದೆ. ಆದರೆ, ದಿನಕರನ ಈ ಕೊಲೆ ನ್ಯಾಯವೇ? ಭಗವಾನನ ಹಾಗೆ ಸ್ವಪ್ರತಿಷ್ಠೆಗಾಗಿ ಸ್ವಹಿತಾಸಕ್ತಿಗಾಗಿ ಕ್ರಾಂತಿಮಂತ್ರ ಪಠಿಸುವವರಿಂದ ಕ್ರಾಂತಿ ಗೆಲ್ಲುತ್ತದೆಯೇ?– ಈ ಪ್ರಶ್ನೆಗಳು ನಮ್ಮನ್ನು ಮತ್ತೆಮತ್ತೆ ಕಾಡುತ್ತವೆ.

**ಕಳ್ಳ ಮತ್ತು ದಿನಕರನ ಮುಖಾಮುಖಿ:**

ಕಳ್ಳ ಮತ್ತು ದಿನಕರನ ಮುಖಾಮುಖಿ ಈ ನಾಟಕದ ಅತ್ಯಂತ ರೋಚಕ

ಘಟ್ಟ. ನಕ್ಸಲೈಟ್ ದಿನಕರನೂ ಸಹ ತನ್ನಂತೆಯೇ ಮನೆಗಳ್ಳತನಕ್ಕೆ ಬಂದವನೆಂದು ಮತ್ತೆಮತ್ತೆ ಕೆಣಕುವ ಕಳ್ಳ, ದಿನಕರನನ್ನು ತನ್ನ 'ಕಳ್ಳತನದ ಪಾಲುದಾರ' ಎನ್ನುತ್ತಾನೆ. 'ನಾನು ನಿನ್ನ ಹಾಗೆ ಕಳ್ಳ ಅಲ್ಲ' ಎಂದು ಸ್ಪಷ್ಟಪಡಿಸಿದರೂ, ಕದ್ದ ಮಾಲನ್ನು 'ಸಮಸಮಾ ಹಂಚಿಕೊಳ್ಳೋಣಾ?' 'ಎಲ್ಲ ನಿಂಗೇ ಬೇಕು ಅಂತೀಯಾ?' ಎಂದು ಕಳ್ಳನು ದಿನಕರನನ್ನು ಛೇಡಿಸುತ್ತಾನೆ. 'ನಾ ನಿಂಗಾಗಿ ಹುಡುಕೀ ಹುಡುಕೀ ಸಾಕಾಗಿತ್ತು' ಎಂದು ಹೇಳಿ, ದಿನಕರನ ಹೆಸರು ಮತ್ತು ಪೂರ್ಣ ವಿವರಗಳು ತನಗೆ ಗೊತ್ತೆಂದು ತಿಳಿಸಿ, ಅಚ್ಚರಿ ಮೂಡಿಸುತ್ತಾನೆ.

'ಜೋಬಿನಾಗೆ ದುಡ್ಡಿಲ್ಲದೋರಿಗೇ ಭಾಷಣ ಕೊಡ್ತೀಯಲ್ಲೋ– ಅದರಿಂದ ಏನು ಬಂದಾತು?'[4] ಎಂದು ಪ್ರಶ್ನಿಸುವ ಕಳ್ಳನು ಭಾಷಣಗಳ ಮೂಲಕ ಕ್ರಾಂತಿಯಾಗುತ್ತದೆ ಎನ್ನುವುದು ಭ್ರಮೆಯೆಂದು ಸೂಚಿಸುತ್ತಲೇ, ಮಾತಿನ ರೂಪದ ಕ್ರಾಂತಿಯ ನಿರರ್ಥಕತೆಯನ್ನು ಹೇಳುತ್ತಾನೆ. "ಗೊತ್ತಾಗ್ತತಿ. ಗೊತ್ತಾಗ್ತತಿ, ನಾ ಹಣ ಮಾಡಿದ್ರೆ ನಿಂಗೂ ಅನ್ನ ಅಂತ ಗೊತ್ತಾಗ್ತತಿ; ನಾ ಸಾಲ ಕೊಟ್ರೆ ನಿನ್ನ ಮಾತುಕತೆ ಕಾರಬಾರು ಅಂತ ಗೊತ್ತಾಗ್ತತಿ"[5] ಎನ್ನುತ್ತಾ ವ್ಯವಸ್ಥೆಯೊಳಗಿನ ಕೊಡುಕೊಳ್ಳೆಯ ವಿಷ ವರ್ತುಲವನ್ನು ಸೂಚಿಸುತ್ತಾನೆ. ಕಳ್ಳನು ಕೇಳುವ ಕೆಲವು ನೇರ ಪ್ರಶ್ನೆಗಳಿಗೆ ದಿನಕರನ ಬಳಿ ಸ್ಪಷ್ಟ ಉತ್ತರವಿಲ್ಲದೆ ತತ್ತರಿಸುವುದನ್ನು ನಾವು ಗಮನಿಸಬಹುದು. ಆದರೂ, ತಾನು ಸಾಗುತ್ತಿರುವ ಕ್ರಾಂತಿಮಾರ್ಗ ಅಪಾಯಕಾರಿಯಾದರೂ, ಅದು ನೈತಿಕತೆಯ ತಳಹದಿಯ ಮೇಲೆ ನಿಂತಿದೆ ಎಂಬ ಆತ್ಮವಿಶ್ವಾಸ ದಿನಕರನದು.

ಇಂತಹ ಆತ್ಮವಿಶ್ವಾಸದಿಂದಲೇ "ನಿಮ್ಮಂಥೋರಿಗೆ ಮಟ್ಟ ಹಾಕೋದಕ್ಕೆ ಪಣ ತೊಟ್ಟಿದ್ದೇನೆ." "ಈ ಕೊಳಕು ಸಮಾಜದ ವಿರುದ್ಧ ನನ್ನ ದಂಗೆ; ನೀ ಮಾಡೋ ಎಲ್ಲ ಕೆಲಸದ ವಿರುದ್ಧ ನನ್ನ ಕೆಲಸ" ಎಂದು ಕಳ್ಳನಿಗೆ ಎಚ್ಚರಿಕೆ ನೀಡುತ್ತಾನೆ. "ಪೋಲೀಸನ ಇನ್ನೊಂದು ಮುಖ ನೀನು" ಎಂದು ಕಿಡಿಕಾರುತ್ತಾನೆ. ಬ್ಲಾಕ್ ಮಾರ್ಕೆಟ್ ಜನ, ಬಿಳಿ ಅಂಗಿಯ ಅಧಿಕಾರಿ, ಭ್ರಷ್ಟ ಶ್ರೀಮಂತ, ರಾಜಕಾರಣಿ, ವರ್ತಕ, ಪೋಲೀಸು, ಅಧ್ಯಾಪಕ– ಹೀಗೆ ಇಡೀ ವ್ಯವಸ್ಥೆಯನ್ನು ದಿನಕರ ಕಳ್ಳನಲ್ಲಿಯೇ ಕಾಣುತ್ತಾನೆ. ಕಳ್ಳನಲ್ಲಿ ವ್ಯವಸ್ಥೆಯನ್ನೂ, ವ್ಯವಸ್ಥೆಯಲ್ಲಿ ಕಳ್ಳನನ್ನೂ ಕಾಣುತ್ತಾ, ಕಳ್ಳ ಮತ್ತು ವ್ಯವಸ್ಥೆಯನ್ನು ಅಭೇದವೆಂಬಂತೆ ಸಮೀಕರಿಸುತ್ತಾ 'ತಲೆ ಕತ್ತರಿಸಬೇಕು, ನಿಂದು' ಎಂದು ಆಕ್ರೋಶ ವ್ಯಕ್ತಪಡಿಸುತ್ತಾನೆ.

ಆದರೆ ದಿನಕರನಷ್ಟೇ ಪರಿಣಾಮಕಾರಿಯಾಗಿ, ತನ್ನದೇ ಆದ ನೈತಿಕತೆ ರೂಪಿಸಿಕೊಂಡವನು ಕಳ್ಳ. ಈತನದು ಸಾಚಾತನ ಮೀರಿದ ನೈತಿಕತೆ. "ಬಲ್ಲವರ ಮನೆಗೆ ನುಗ್ಗೋಕೆ ನಾಚಿಕೆ ಆಗಬ್ಯಾಡವ?" "ದಡ್ಡ– ದಡ್ಡ ಬಡ್ಡೀ ಮಗ ನೀನು. ಕಳ್ಳರ ನಿಯತ್ತಿಲ್ಲ ನಿಂಗೆ!" ಎಂದು ದಿನಕರನನ್ನು ಜರೆಯುತ್ತಾನೆ. ಈತ ಹಸಿವಿನ ನೋವು

ಕಂಡವನು. ಸಿದ್ಧಾಂತಕ್ಕಿಂತ ಈತನಿಗೆ ಬದುಕು ಮುಖ್ಯವೆನಿಸುತ್ತದೆ. ಹಾಗಾಗಿ, ದಿನಕರನು ಒಡೆದು ಹಾಕಿದ ಸಾಮಾನುಗಳನ್ನು ತೋರಿಸಿ, "ನಾವೆಂದೂ ಹಿಂಗೆ ಲಕ್ಷ್ಮೀನ ಹಾಳು ಮಾಡಲ್ಲ" ಎಂದು ವಿವೇಕದ ಮಾತುಗಳನ್ನಾಡುತ್ತಾನೆ.

ಅಷ್ಟೇ ಅಲ್ಲದೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಕ್ರಾಂತಿಕಾರಿ ದಿನಕರನ ಜಂಘಾಬಲವೇ ಉಡುಗುವಂತೆ, "ನಿನ್ನ ಬುದ್ಧಿ ಬಲ್ಲೆ, ಕಣಲೇ. ಓದಾಕಿಲ್ಲ, ಬರೆಯಾಕಿಲ್ಲ, ಗೇಯಾಕಿಲ್ಲ, ಬೆಳೆಯಾಕಿಲ್ಲ - ಕನಸು ಕಾಣ್ತಾನಂತೆ, ದೇಶ ಕಟ್ಟತಾನಂತೆ, ಮಗ! ಥೂ! ಮತ್ತೆ ಕೈ ಎತ್ತಿದರೆ ನೀ ಹುಟ್ಟಲಿಲ್ಲ ಅನ್ನಿಸಿಬಿಡ್ತೀನಿ!"[6] ಎಂದು ಧಮಕಿ ಹಾಕುತ್ತಾನೆ. ಕಳ್ಳನ ವಾಕ್ಚಾತುರ್ಯ, ಧೈರ್ಯ, ದಿಟ್ಟತನ, ಆತ್ಮವಿಶ್ವಾಸ, ನೈತಿಕತೆ, ಸಮಯ ಪ್ರಜ್ಞೆ, ವ್ಯಂಗ್ಯ-ಉಡಾಫೆಯ ಮಾತುಗಳ ಮುಂದೆ, ಪಿಸ್ತೂಲು ಕೈಲಿದ್ದರೂ ನಕ್ಸಲೈಟ್ ದಿನಕರ ಅಸಹಾಯಶೂರನಂತೆ ನಿಲ್ಲುತ್ತಾನೆ. ದಿನಕರನ ಬಹಳ ದೊಡ್ಡ ಸಮಸ್ಯೆಯೇ ಗುರಿಹೀನತೆ. ಮುಂದೇನು ಮಾಡಬೇಕು ಎಂಬುದು ಗೊತ್ತಿಲ್ಲದೆ ತಲ್ಲಣಿಸುತ್ತಾನೆ. ಕಳ್ಳನಿಗೆ ಮುಂದಿನ ಗಳಿಗೆಯ ಬಗ್ಗೆ ಸ್ಪಷ್ಟತೆ ಇದೆ. ಆದರೆ ಇಂತಹ ಸ್ಪಷ್ಟತೆ ದಿನಕರನಿಗೆ ಇಲ್ಲ.

**ಸುಧಾ, ಭಗವಾನ್ ಮತ್ತು ದಿನಕರನ ಮುಖಾಮುಖಿ:**

ಕಳ್ಳ ಓಡಿ ಹೋದ ನಂತರ ದಿನಕರನ ಅಸಹಾಯಕತೆ ಮತ್ತಷ್ಟು ಹೆಚ್ಚಾಗುವುದನ್ನು ನಾವು ಗಮನಿಸಬಹುದು. ಚೆಲ್ಲಾಪಿಲ್ಲಿಯಾಗಿ ಒಡೆದು ಬಿದ್ದಿರುವ ವಸ್ತುಗಳು, ಮುರಿದ ಕಿಟಕಿ, ಬೆವತಿರುವ ದಿನಕರನ ಅಸ್ತವ್ಯಸ್ತಗೊಂಡ ಬಟ್ಟೆ, ಕೆದರಿದ ತಲೆ- ಇಂತಹ ಸನ್ನಿವೇಶದಲ್ಲಿ ಭಗವಾನ್-ಸುಧಾಳ ಆಗಮನ ಮತ್ತು ಕಳ್ಳನ ಹಠಾತ್ ನಿರ್ಗಮನ ದಿನಕರನನ್ನು ನಿರುತ್ತರನನ್ನಾಗಿ ಮಾಡುತ್ತದೆ.

ಇಂತಹ ದಿಕ್ಕುತೋಚದ ಪರಿಸ್ಥಿತಿಯಲ್ಲಿ, ಭಗವಾನ್ ಮತ್ತು ಸುಧಾ, ನಿರಪರಾಧಿಯಾಗಿದ್ದರೂ ದಿನಕರನನ್ನು ಅಪರಾಧಿಯಂತೆ, ಥೇಟು ಕಳ್ಳನಂತೆ ನೋಡುತ್ತಾರೆ. ಈ ದಂಪತಿಗಳ ಚುಚ್ಚು ಮಾತುಗಳನ್ನು ಅಪನಂಬಿಕೆಯ ನೋಟಗಳನ್ನು ಸಹಿಸಿಕೊಳ್ಳಲಾಗುವುದಿಲ್ಲ ದಿನಕರನಿಗೆ. ತನ್ನಲ್ಲಿ ಕ್ರಾಂತಿಯ ಕಿಚ್ಚನ್ನು ಹೊತ್ತಿಸಿದ ಗುರು ಭಗವಾನನ ಬಗ್ಗೆ ಇದ್ದ ಭವ್ಯಕಲ್ಪನೆ ಕ್ಷಣಮಾತ್ರದಲ್ಲಿ ಛಿದ್ರಗೊಳ್ಳುತ್ತದೆ.

ಅತ್ಯಂತ ಮುಜುಗರ ಸ್ವಭಾವದ ದಿನಕರ ಕ್ರಾಂತಿಯ ಹೆಸರಿನಲ್ಲಿ ಕೊಲೆಗಡುಕನಾದದ್ದು ಮತ್ತು ಪೊಲೀಸರ ಕಣ್ಣಿಂದ ತಲೆಮರೆಸಿಕೊಂಡು ನೆಲೆಯಿಲ್ಲದೆ ಓಡಾಡುತ್ತಿರುವುದರ ಹಿಂದೆ ಭಗವಾನನ ಮುಖ್ಯ ಪಾತ್ರವಿದೆ. ಈ ವಿಚಾರವನ್ನು ಬಹಿರಂಗಪಡಿಸುವುದಕ್ಕೂ ಸಹ ಭಗವಾನ್ ಅವಕಾಶ ನೀಡುವುದಿಲ್ಲ. ಆದರೆ, ಇದು ಗೊತ್ತಿದ್ದೂ ಗೊತ್ತಿಲ್ಲದಂತೆ ನಟಿಸುವ ಸುಧಾ, ದಿನಕರನನ್ನು ಅತ್ಯಂತ ಅಮಾನವೀಯವಾಗಿ ನಡೆಸಿಕೊಳ್ಳುತ್ತಾಳೆ. ಹಾಗಾಗಿ, ಸಹನೆಯ ಕಟ್ಟೆಯೊಡೆದು

ಸ್ಫೋಟಗೊಳ್ಳುವ ದಿನಕರ ಸುಧಾಳಿಗೆ ಹೇಳುವ ಮಾತುಗಳನ್ನು ನಾವು ಗಮನಿಸಬಹುದು:

"ಇಲ್ಲಿ ಕೇಳು. ನೀನು ಈತನ ಮೊದಲನೆ ಆಸ್ತಿ, ನಿನಗೆ ಬೇರೆ ಮೈ ಇಲ್ಲ; ಇವನ ತೊಡೆಯ ಒಂದು ಭಾಗ ನೀನು; ಟೆಲಿಫೋನ್ ರಿಸೀವರ್ ಥರ. ಇವನೇ ನಿನ್ನ ದೇಹದ ಬಂಡವಾಳಗಾರ. ಈತ ಇಲ್ಲಿಯ ಕಳ್ಳ".

ಭಗವಾನನ ಮುಖವಾಡಗಳನ್ನು ಕಳಚುತ್ತಲೇ, ತನ್ನ ಇಡೀ ನೋವು, ಹತಾಶೆಯನ್ನು ವ್ಯಕ್ತಪಡಿಸುತ್ತಾ, ಸಹಿಸಿಕೊಳ್ಳಲಾಗದ ಸಿಟ್ಟನ್ನು ಹೀಗೆ ಕಾರಿಕೊಳ್ಳುತ್ತಾನೆ ದಿನಕರ:

"ನೀನು ದೊಡ್ಡವನೆಂದು ತಿಳಿದಿದ್ದಿ; ಎಲ್ಲರಿಗೂ ಮೋಸ ಮಾಡಬಹುದೆಂದು ಲೆಕ್ಕಹಾಕಿದ್ದೀ. ಎಲ್ಲ ಕಲ್ಯಾಣಗುಣಗಳನ್ನೂ ಕೂಡಿಸಿಕೊಂಡು ಗೆಲ್ಲಬಹುದಂತ ಮಾಡಿದ್ದೀ. ಆದರೆ ನೀನು ಎಲ್ಲ ಕ್ರಾಂತಿಯ ಶತ್ರು, ಮನುಷ್ಯಕೋಟಿಯ ಆಜನ್ಮ ವೈರಿ ನೀನು– I hate you. ನೀನು ಆಸ್ಥಾನದಲ್ಲಿದ್ದೆ– ಬಡವರ ಕತೆ ಹೇಳುತ್ತ; ನೀನು ಬಡವರ ಹತ್ತಿರ ಇದ್ದೆ– ಕ್ರಾಂತಿಯ ಕತೆ ಹೇಳುತ್ತ. ಈಕೆಯ ದೇಹದ ವಯ್ಯಾರದ ಹಾಗೆ ನಿನ್ನ ಬುದ್ಧಿಯ ವಯ್ಯಾರ; ನಿನ್ನ ನಂಬಿಕೆ ಎಂದೂ ಇರಲಿಲ್ಲ; ಜಗತ್ತಿನ ದೊಡ್ಡ ಸಮಯಸಾಧಕ ನೀನು."[7]

ದಿನಕರನ ಆವೇಶದ ಈ ಮಾತುಗಳು ವಿಪರೀತ ವ್ಯಂಗ್ಯದಿಂದ ಕೂಡಿದ್ದರೂ, ಈ ಆವೇಶ ಮತ್ತು ವ್ಯಂಗ್ಯದ ಹಿಂದೆ ದಿನಕರನ ನೈತಿಕ ಸಿಟ್ಟಿದೆ. ಭಗವಾನ್ ತನ್ನಂಥವರನ್ನು ಬಳಸಿಕೊಂಡು ಬಿಸಾಡುತ್ತಿರುವುದರ ಬಗೆಗೆ ಆಕ್ರೋಶವಿದೆ. ಈ ಘಟ್ಟದಲ್ಲಿ, ಭಗವಾನನ ಆಷಾಢಭೂತಿತನ, ಭೋಳೇತನ, ಹೇಡಿತನಗಳನ್ನು ಭಾವೋದ್ವೇಗದಿಂದ ಮುಖದ ಮೇಲೆ ಹೊಡೆದಂತೆ ಹೇಳುತ್ತಾನೆ ಶಿಷ್ಯ ದಿನಕರ. ಭಗವಾನ್ ಯಾವತ್ತೂ ನೈಜ ಕ್ರಾಂತಿಕಾರಿ ಆಗಿರಲೇ ಇಲ್ಲ ಎಂಬ ವಾಸ್ತವಸತ್ಯವನ್ನು ಬಿಚ್ಚಿಡುತ್ತಾನೆ.

ದಿನಕರನ ಈ ಸತ್ಯದ ಮಾತುಗಳನ್ನು ಜೀರ್ಣಿಸಿಕೊಳ್ಳಲಾರದೆ, ಭಗವಾನ್ ಪಿಸ್ತೂಲು ಕೈಗೆ ತೆಗೆದುಕೊಂಡು ದಿನಕರನನ್ನು ಕೊಲ್ಲಲು ನಿರ್ಧರಿಸುತ್ತಾನೆ. ಆದರೆ ದಿನಕರನ ಹೇಡಿತನ ಕೊಲ್ಲುವಲ್ಲಿಯೂ ಕೈಕೊಡುತ್ತದೆ. ಹಾಗಾಗಿ ಸುಧಾ ಅದೇ ಪಿಸ್ತೂಲಿನಿಂದ ಗುರಿಯಿಟ್ಟು ದಿನಕರನನ್ನು ಕೊಲ್ಲುತ್ತಾಳೆ.

**ನಾಟಕದ ಅಂತಿಮ ಘಟ್ಟ:**

ನಾಡಗೀತೆಯಿಂದ ಆರಂಭವಾಗಿ ರಾಷ್ಟ್ರಗೀತೆಯೊಂದಿಗೆ ಮುಕ್ತಾಯವಾಗುವ ಮೂರನೇ ದೃಶ್ಯ ನಾಟಕೀಯತೆಯ ಪರಮಾವಧಿ ಎನ್ನಿಸುತ್ತದೆ. ಲಲಿತ–ಮಾಲತಿಯರು

ಕಾರ್ಯಕ್ರಮ ನಿರ್ವಹಣೆಯಲ್ಲಿ ತೋರುವ ಶಿಸ್ತು, ಧೂಪದ ವಾಸನೆ, ರೆಕಾರ್ಡೆಡ್ ಚಪ್ಪಾಳೆ, ವೇದಿಕೆಯ ಮೇಲೆ ಕುಳಿತ ಭಗವಾನ್, ಸುಧಾ, ಶಂಕರ, ರಾಮದಾಸರ ಸೋಗಲಾಡಿತನ– ಈ ದೃಶ್ಯದ ಪ್ರತಿಯೊಂದು ಅಂಶದಲ್ಲಿಯೂ ಎದ್ದುಕಾಣುವ ಔಪಚಾರಿಕತೆ ನಾಟಕದ ನೋಡುಗರಾದ ನಮಗೆ ಪಕ್ಕಾ ತೋರಿಕೆಯದು ಎನಿಸುತ್ತದೆ. ಆದರೆ, ಈ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳದ ಭಗವಾನನ ಅಭಿಮಾನಿಗಳ ಹರ್ಷೋದ್ಗಾರ ಮುಗಿಲು ಮುಟ್ಟುವುದು ದುರಂತ ವ್ಯಂಗ್ಯ.

ಆದ್ದರಿಂದಲೇ, ಸ್ವತಃ ತಾನು ವ್ಯವಸ್ಥೆಯ ಭಾಗವಾಗಿಯೂ, ಭಗವಾನ್ ಥೇಟು ವಿರೋಧಪಕ್ಷದ ನಾಯಕನಂತೆ ಭಾಷಣ ಮಾಡುತ್ತಾನೆ: “ಈ ದೇಶದಲ್ಲಿ ಯಾವ ಕ್ರಾಂತಿಗೂ ಉಳಿಗಾಲವಿಲ್ಲ. ಇಲ್ಲಿ ಯಾವ ಸುಧಾರಣೆಯೂ ನಡೆಯೋದಿಲ್ಲ” ಎನ್ನುತ್ತಾನೆ. ಒಂದು ಹಂತದಲ್ಲಿ, ಭಾಷಣದ ಆವೇಗದಲ್ಲಿ ಈತ ಸತ್ಯವನ್ನೇ ಹೇಳುತ್ತಿದ್ದಾನೆ ಎನಿಸುತ್ತದೆ. ಈತನ ಮಾತುಗಳು ಏಕಕಾಲಕ್ಕೆ ವ್ಯವಸ್ಥೆಯ ವಿಮರ್ಶೆಯಂತೆಯೂ ಆತ್ಮವಿಮರ್ಶೆಯಂತೆಯೂ ಕೇಳುತ್ತವೆ. ಸುಳ್ಳು ನಿಜಗಳ ವ್ಯತ್ಯಾಸ ಗುರುತಿಸಲಾಗದ ಜನಸಾಮಾನ್ಯರ ಮೂರ್ಖತನವನ್ನೂ ಸಹ ಭಗವಾನ್ ಗೇಲಿ ಮಾಡುತ್ತಾನೆ. “ಹೀಗೆ ಮಾತು ಮಾತಿಗೆ ಚಪ್ಪಾಳೆ ಹೊಡೆವ ಸಮಾಜಕ್ಕೆ ಮುಕ್ತಿ ಇಲ್ಲ”[8] ಎಂದು ತನ್ನ ಅಭಿಮಾನಿಗಳಿಗೆ ಚಾಟಿಬೀಸುತ್ತಾ, ತನಗಿರುವ ಸಾಮಾಜಿಕ ಕಾಳಜಿಯನ್ನು ಪ್ರದರ್ಶಿಸುತ್ತಾನೆ.

ನಾಯಕನನ್ನು ಆರಾಧಿಸುವ ಹಂತಕ್ಕೆ ತಲುಪಿರುವ ಅಂಧಾಭಿಮಾನಿಗಳಲ್ಲಿ ಹೇಗೆ ಪ್ರಜ್ಞಾವಲಯಗಳೇ ಸತ್ತುಹೋಗಿರುತ್ತವೆ ಎಂಬುದಕ್ಕೆ ಈ ದೃಶ್ಯ ಅತ್ಯುತ್ತಮ ನಿದರ್ಶನ. ಭಗವಾನ್ ಕ್ರಾಂತಿಯ ಅಗತ್ಯವಿದೆ ಎಂದಾಗಲೂ ಅವರು ಚಪ್ಪಾಳೆ ತಟ್ಟುತ್ತಾರೆ. ಕ್ರಾಂತಿಯನ್ನು ಗೇಲಿ ಮಾಡಿದಾಗಲೂ ಚಪ್ಪಾಳೆ ತಟ್ಟುತ್ತಾರೆ. ವೈರುಧ್ಯಗಳಿಂದ ಕೂಡಿದ ಭಗವಾನನ ಈ ಭಾಷಣ ಮತ್ತು ಈ ಭಾಷಣಕ್ಕೆ ಸಿಗುವ ಪ್ರತಿಸ್ಪಂದನೆ ನಮ್ಮ ವರ್ತಮಾನ ಭಾರತದ ರಾಜಕಾರಣದ ಅಣಕದಂತೆಯೇ ಕಾಣುತ್ತದೆ.

ಯಾವುದೇ ಸಾಮಾಜಿಕ ಕ್ರಾಂತಿ ಒಬ್ಬ ವ್ಯಕ್ತಿಯಿಂದ ಸಾಧ್ಯವಾಗುವಂಥದ್ದಲ್ಲ. ಕ್ರಾಂತಿಯ ಯಶಸ್ಸು ಸಾಮೂಹಿಕ ಪ್ರಯತ್ನದ ಮೇಲೆ ನಿಂತಿರುತ್ತದೆ. ಈ ಹಿನ್ನೆಲೆಯಲ್ಲಿ, ನಾಟಕದ ಕೊನೆಯ ದೃಶ್ಯವನ್ನು ನಾವು ಸೂಕ್ಷ್ಮವಾಗಿ ಗಮನಿಸಬಹುದು. ಕ್ರಾಂತಿಯನ್ನು ಮೆಟ್ಟಿಲಾಗಿಸಿಕೊಂಡು ರಾಜಕಾರಣದ ಅಟ್ಟಕ್ಕೆ ಏರ ಬಯಸಿದವನು ಭಗವಾನ್. ಆದರೆ ತನ್ನ ಈ ಹಾದಿಯಲ್ಲಿ ನೈತಿಕತೆಯನ್ನು ಕಳೆದುಕೊಂಡ ಭಗವಾನ್, ಎಷ್ಟೇ ಪ್ರಯತ್ನಪಟ್ಟರೂ ಮಾತುಗಳಿಗಾಗಿ ತಡಕಾಡುತ್ತಾನೆ. ಕ್ರಾಂತಿಯ ಬಗ್ಗೆ ಮಾತಾಡುತ್ತಾ ಮಾತಾಡುತ್ತಾ, ಸ್ಪಷ್ಟತೆಯ ಕೊರತೆಯಿಂದ ವಿಷಯಾಂತರ ಮಾಡುತ್ತಾನೆ. ಅಸ್ವಸ್ಥಗೊಳ್ಳುತ್ತಾನೆ. ಆತನ ಭಾಷಣಕ್ಕೆ ನಿರ್ದಿಷ್ಟ ಗುರಿ ಉದ್ದೇಶಗಳಿಲ್ಲದೆ ಅಡ್ಡಾದಿಡ್ಡಿ

ಸಾಗುತ್ತದೆ. ನಾಟಕದ ಈ ಘಟನೆ ಎಂಥಾ ಅದ್ಭುತ ಭಾಷಣಕಾರನಿಗೂ ಮಾತುಸೋತು ಪದಗಳಿಗಾಗಿ ತಡವರಿಸುವ, ಆಯಾಸಗೊಳ್ಳುವ, ವಿಶ್ರಾಂತಿ ತೆಗೆದುಕೊಳ್ಳುವ ಕಾಲ ಬರುತ್ತದೆ ಎನ್ನುವುದಕ್ಕೆ ಸಾಕ್ಷಿಯಂತಿದೆ.

ಇಂಥ ಸಂದರ್ಭದಲ್ಲಿ ಸಮಯಪ್ರಜ್ಞೆ ಮೆರೆದ ಸುಧಾ, ತನ್ನ ಗಂಡನ ಭಾಷಣದ ರಥವನ್ನು ತಹಬಂದಿಗೆ ತಂದು ಮುನ್ನಡೆಸುತ್ತಾಳೆ. ಈ ಹಿಂದೆ ಯಾವತ್ತೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಸುಧಾ ಈಗ ಪಳಗಿದವಳಂತೆ ಈ ದೇಶದ ಅಖಂಡ ಸಂಸ್ಕೃತಿಯ ಬಗೆಗೆ; ಭ್ರಷ್ಟ ವ್ಯವಸ್ಥೆ, ಸಾಮಾಜಿಕ ಜಾಗೃತಿ, ಕ್ರಾಂತಿ ಮತ್ತು ಪ್ರಾಮಾಣಿಕತೆಯ ಬಗೆಗೆ ಪ್ರಸ್ತಾಪಿಸಿ; ನಮ್ಮ ವಿದ್ಯಾಸಂಸ್ಥೆಗಳು, ನ್ಯಾಯಾಲಯಗಳು, ದೇವಸ್ಥಾನಗಳು, ಮಠ ಮುಂತಾದವು ಸ್ವಚ್ಛವಾಗಿ, ದೇಶ ಸ್ವರ್ಗವಾಗಬೇಕೆಂದು ಆಶಿಸುತ್ತಾ ಹೊಸ ಆದರ್ಶಗಳನ್ನು ಕನಸುಗಳನ್ನು ಬಿತ್ತುತ್ತಾಳೆ.

ಒಂದು ಹಂತದಲ್ಲಿ, ತನ್ನ ವೈಯಕ್ತಿಕ ಬದುಕನ್ನು ಮೀರಿ ಸಾಮಾಜಿಕವಾದದ್ದು ಯಾವುದೂ ಸಹ ತನಗೆ ಮುಖ್ಯವಲ್ಲ ಎಂದು ಭಗವಾನನಿಗೆ ನೇರವಾಗಿ ಸ್ಪಷ್ಟಪಡಿಸಿದ್ದ ಸುಧಾ; ಭಗವಾನನ ಭಾಷಣಗಳ ಬಗ್ಗೆ ಅತ್ಯಂತ ತಿರಸ್ಕಾರದ ಮಾತುಗಳನ್ನಾಡುತ್ತಿದ್ದ ಸುಧಾ; ಈಗ ಇದ್ದಕ್ಕಿದ್ದಂತೆ, ಭಗವಾನನನ್ನೂ ಮೀರಿಸುವಂತೆ ಆತನದೇ ಶೈಲಿಯಲ್ಲಿ ಭಾಷಣ ಮಾಡಿ ಸಾರ್ವಜನಿಕರ ಗಮನ ಸೆಳೆದದ್ದು, ಪೂರ್ವಯೋಜಿತ ಕುಟುಂಬ ರಾಜಕಾರಣದ ಒಳಸುಳಿಗಳ ಸಂಕೇತದಂತೆ ಕಾಣುತ್ತದೆ.

ನಾಟಕದ ಕೊನೆಗೆ, ಕ್ರಾಂತಿಯೇ ಮೈವೆತ್ತಂತೆ ಬಿಂಬಿಸಿಕೊಂಡಿದ್ದ ಭಗವಾನನನನ್ನು ಅಭಿಮಾನಿಗಳು ಜಯಕಾರ ಹಾಕುತ್ತಾ ಮೇಲೆತ್ತಿಕೊಂಡು ಮೆರವಣಿಗೆ ಮಾಡಿದ್ದು, ಭಗವಾನನ ಶವಯಾತ್ರೆಯಂತೆ ಕಾಣುತ್ತದೆ ಎಂಬ ಸೂಚನೆ ನಾಟಕದಲ್ಲೇ ಇದೆ. ಇದು ಭಗವಾನನ ನಿರ್ಗಮನದ ಸಂಕೇತವೂ ಹೌದು; ವ್ಯಕ್ತಿ ವಿಜೃಂಭಿಸಿ, ತತ್ವ ಮತ್ತು ಆಚರಣೆಯಲ್ಲಿ ಮುಚ್ಚಲು ಸಾಧ್ಯವಿಲ್ಲದಷ್ಟು ಅಂತರ ಸೃಷ್ಟಿಯಾಗಿ, ಕ್ರಾಂತಿ ಭಗ್ನಗೊಂಡದ್ದರ ಸಂಕೇತವೂ ಹೌದು.

**ಕೊನೆ ಟಿಪ್ಪಣಿಗಳು:**

1. ಭಾಷಣಕಾರ ಭಗವಾನ್ ತನಗೆ ಬಡ ವಿದ್ಯಾರ್ಥಿಗಳ ಬಗೆಗೆ ವಿಶೇಷ ಕಾಳಜಿಯಿದೆ ಎಂಬುದನ್ನು ಮನದಟ್ಟು ಮಾಡಿಸುವುದಕ್ಕಾಗಿಯೇ ಆಡುವ ಮಾತುಗಳಿವು. (ಗಮನಿಸಿ: ಕ್ರಾಂತಿ ಬಂತು, ಕ್ರಾಂತಿ, ದೃಶ್ಯ –1, ಪುಟ 2)
2. ಸಮಾಜವಾದ, ಕಮ್ಯುನಿಸಂನಂತಹ ಸಿದ್ಧಾಂತಗಳಿಗಿಂತ ವ್ಯಕ್ತಿಗತವಾಗಿ ತಾನು ದೊಡ್ಡವನು ಎಂಬ ಅಹಂ ಭಗವಾನನ ಈ ಮಾತುಗಳಲ್ಲಿದೆ. (ಗಮನಿಸಿ: ಕ್ರಾಂತಿ ಬಂತು, ಕ್ರಾಂತಿ, ದೃಶ್ಯ –1,

ಪುಟ 2)

3. ಭಗವಾನನ ಈ ಮಾತುಗಳು ಆತನ ಜಾಣತನವನ್ನಷ್ಟೇ ಅಲ್ಲದೆ, ಆತನ ಪಲಾಯನವಾದವನ್ನೂ ಗೋಸುಂಬೆತನವನ್ನೂ ಸಹ ಸೂಚಿಸುತ್ತವೆ. (ಗಮನಿಸಿ: ಕ್ರಾಂತಿ ಬಂತು, ಕ್ರಾಂತಿ, ದೃಶ್ಯ –3, ಪುಟ 38)
4. ಕಳ್ಳನ ಈ ಮಾತುಗಳಲ್ಲಿ ವ್ಯಂಗ್ಯ ತುಂಬಿತುಳುಕುತ್ತಿದೆ. (ಗಮನಿಸಿ: ಕ್ರಾಂತಿ ಬಂತು, ಕ್ರಾಂತಿ, ದೃಶ್ಯ –2, ಪುಟ 22)
5. ನಾಟಕದಲ್ಲಿ ದಿನಕರ ಆದರ್ಶದ ಸಂಕೇತವಾದರೆ, ಕಳ್ಳ ವಾಸ್ತವದ ಸಂಕೇತ. ಕಳ್ಳನ ಈ ಮಾತುಗಳು ವ್ಯವಸ್ಥೆಯ ವಾಸ್ತವ ಸತ್ಯಗಳನ್ನು ಸೂಚಿಸುತ್ತವೆ. ಆದರೆ ಈ ವಾಸ್ತವವನ್ನು ಕ್ರಾಂತಿಕಾರಿ ದಿನಕರ ಅರ್ಥ ಮಾಡಿಕೊಳ್ಳುವುದರಲ್ಲಿ ವಿಫಲನಾಗುತ್ತಾನೆ. ದಿನಕರನ ಈ ವೈಫಲ್ಯದಲ್ಲಿಯೇ ಆತನ ದುರಂತವಿದೆ. (ಗಮನಿಸಿ: ಕ್ರಾಂತಿ ಬಂತು, ಕ್ರಾಂತಿ, ದೃಶ್ಯ –2, ಪುಟ 25)
6. ಇದು ಕಳ್ಳ ಮತ್ತು ದಿನಕರನ ಮುಖಾಮುಖಿಯ ರೋಚಕ ಘಟ್ಟ. ವ್ಯವಸ್ಥೆಯ ಬಗ್ಗೆ ಕಳ್ಳನಿಗಿರುವ ಸ್ಪಷ್ಟತೆ ಮತ್ತು ಕಳ್ಳನ ವಾಕ್ಚಾತುರ್ಯದ ಮುಂದೆ ಸೈದ್ಧಾಂತಿಕ ಬದ್ಧತೆಯುಳ್ಳ ದಿನಕರ ಮಂಕಾಗಿಬಿಡುತ್ತಾನೆ. (ಗಮನಿಸಿ: ಕ್ರಾಂತಿ ಬಂತು, ಕ್ರಾಂತಿ, ದೃಶ್ಯ –2, ಪುಟ 28–29)
7. ಭಗವಾನ್ ಮತ್ತು ಸುಧಾಳೊಂದಿಗಿನ ಮುಖಾಮುಖಿಯಲ್ಲಿಯೂ ದಿನಕರ ಆವೇಶದಿಂದ ವರ್ತಿಸುತ್ತಾನೆ. ದಿನಕರ ತನ್ನ ಆತ್ಮಸಾಕ್ಷಿಗೆ ತಕ್ಕಂತೆ ನಿಜವನ್ನೇ ಹೇಳುತ್ತಾನಾದರೂ ಸನ್ನಿವೇಶವನ್ನು ಅರ್ಥಮಾಡಿಕೊಳ್ಳದೆ ಈತ ಆಡುವ ಈ ಮಾತುಗಳು ಮತ್ತು ಈತ ತೆಗೆದುಕೊಳ್ಳುವ ನಿರ್ಧಾರಗಳು ಆತ್ಮಹತ್ಯಾತ್ಮಕ ಎನ್ನಿಸುತ್ತವೆ. (ಗಮನಿಸಿ: ಕ್ರಾಂತಿ ಬಂತು, ಕ್ರಾಂತಿ, ದೃಶ್ಯ –2, ಪುಟ 31–33)
8. ದಿನಕರನ ಕೊಲೆಯನ್ನೂ ಸಹ ಬಂಡವಾಳ ಮಾಡಿಕೊಂಡು, ತನ್ನ ಮಾತಿನ ಚಾಣಾಕ್ಷತನದಿಂದಲೇ ಸಮಾಜಕ್ಕೆ ಮಂಕುಬೂದಿ ಎರಚಿದ ಅಧ್ಯಾಪಕ ಮತ್ತು ಹುಸಿ ಕ್ರಾಂತಿಕಾರಿ ಭಗವಾನ್. ಈತ ಕ್ರಾಂತಿಯನ್ನು ಹಳ್ಳ ಹಿಡಿಯುವಂತೆ ಮಾಡಿಯೂ ಯುವಜನತೆಯಲ್ಲಿ ಮತ್ತೆ ಕ್ರಾಂತಿಯ ಕನಸು ಬಿತ್ತುವ ಪ್ರಯತ್ನವನ್ನು ತನ್ನ ಭಾಷಣದ ಮೂಲಕ ಮಾಡುತ್ತಾನೆ. ಆದರೆ ಈ ಪ್ರಯತ್ನದಲ್ಲಿ ಭಗವಾನ್ ಮಾತುಗಳಿಗಾಗಿ ತಡವರಿಸಿದಾಗ, ಇದ್ದಕ್ಕಿದ್ದಂತೆ ಮಧ್ಯಪ್ರವೇಶಿಸಿ, ಭಗವಾನನ್ನೂ ಸಹ ಮೀರಿಸುವಂತೆ, ಪಳಗಿದವಳಂತೆ ಸುಧಾ ಕ್ರಾಂತಿಯ ಕನಸು ಬಿತ್ತುವ ಭಾಷಣ ಮಾಡುತ್ತಾಳೆ. ಆ ಮೂಲಕ ಗೋಸುಂಬೆತನದಲ್ಲಿ ಭಗವಾನನಿಗಿಂತ ತಾನೇನೂ ಕಡಿಮೆಯಲ್ಲ ಎಂಬುದನ್ನು ಸಾಬೀತುಪಡಿಸುತ್ತಾಳೆ. ಈ ದೃಶ್ಯ ನಮ್ಮ ವರ್ತಮಾನ ಭಾರತದಲ್ಲಿನ ಕುಟುಂಬ ರಾಜಕಾರಣದ ಅಣಕದಂತೆ ಕಾಣುತ್ತದೆ. (ಗಮನಿಸಿ: ಕ್ರಾಂತಿ ಬಂತು, ಕ್ರಾಂತಿ, ದೃಶ್ಯ –2, ಪುಟ 39)

**ಆಕರ ಗ್ರಂಥ:**

1. ಲಂಕೇಶ್ ಪಿ., (1995), ಕ್ರಾಂತಿ ಬಂತು, ಕ್ರಾಂತಿ, ಬೆಂಗಳೂರು: ಪತ್ರಿಕೆ ಪ್ರಕಾಶನ.